Empowerment through livelihood

ಕರ್ನಾಟಕ ಸರ್ಕಾರ

ಸಂಖ್ಯೆ: **KSRLPS/SPM (M&E)/3/2013-14**

ಅಭಿಯಾನ ನಿರ್ದೇಶಕರು (ಸಂಜೀವಿನಿ) ರವರ ಕಛೇರಿ
ಐ-145 ಹೋಟೆಲ್, ಮೊದಲನೇ ಮಹಡಿ ಇನ್‌ಫೆಂಟ್ರಿ
ರಸ್ತೆ, ಬೆಂಗಳೂರು, ದಿನಾಂಕ :06-11-2013

## ಸುತ್ತೋಲೆ

ವಿಷಯ: ಸಂಘಗಳ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲು ನಿಗಧಿಪಡಿಸಿರುವ ಗೌರವಧನವನ್ನು ಪರಿಷ್ಕರಿಸಿರುವ ಕುರಿತು.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ: ಗ್ರಾಅಪ 50 ಎಸ್‌ಜಿವೈ 2013 ದಿನಾಂಕ. 21.08.2013.

ಸಂಜೀವಿನಿ (ಎನ್‌ಆರ್‌ಎಲ್‌ಎಂ) ಯೋಜನೆಯಡಿ ರಾಜ್ಯದಲ್ಲಿನ ಎಲ್ಲಾ ಮಹಿಳಾ ಸ್ವಸಹಾಯ ಸಂಘಗಳಿಗೆ ಬಡ್ಡಿ-ಸಹಾಯಧನವನ್ನು ನೀಡಲು ಸ್ವಸಹಾಯ ಸಂಘಗಳ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲು ಉಲ್ಲೇಖಿತ ಸುತ್ತೋಲೆಯಲ್ಲಿ ಪ್ರತಿ ಸ್ವಸಹಾಯ ಸಂಘದ ಮಾಹಿತಿಯನ್ನು ಅಳವಡಿಸಲು ಗೌರವಧನ ರೂ.15 ರಂತೆ ನಿಗಧಿಪಡಿಸಲಾಗಿತ್ತು.

ಪ್ರತಿ ಸ್ವಸಹಾಯ ಸಂಘದ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲು ಸುಮಾರು 2 ಗಂಟೆಗಳ ಕಾಲಾವಕಾಶ ತೆಗೆದುಕೊಳ್ಳುತ್ತಿದ್ದು, ಸದರಿ ಕಾರ್ಯಕ್ಕೆ ಪ್ರಸ್ತುತ ನಿಗದಿಪಡಿಸಿರುವ ಗೌರವಧನ ರೂ.15 ರಿಂದ ರೂ.20 ಕ್ಕೆ ಹೆಚ್ಚಿಸಲು ಹಲವಾರು ಜಿಲ್ಲಾ ಪಂಚಾಯಿತಿಗಳಿಂದ ಮನವಿ ಸ್ವೀಕರಿಸಲಾಗಿದೆ. ಮನವಿಗಳನ್ನು ಪರಿಶೀಲಿಸಿದೆ. ಪ್ರತಿ ಸ್ವಸಹಾಯ ಸಂಘದ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲು ಪ್ರಸ್ತುತ ನಿಗದಿಪಡಿಸಿರುವ ಗೌರವಧನವನ್ನು ಪರಿಷ್ಕರಿಸಿ ರೂ.15 ರಿಂದ ರೂ.20 ಕ್ಕೆ ಹೆಚ್ಚಿಸಲಾಗಿದೆ. ಇದರಂತೆ ಎಲ್ಲಾ ಜಿಲ್ಲಾ ಪಂಚಾಯಿತಿಗಳು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

Hemalatha

(ಪಿ.ಹೇಮಲತ)
ಅಭಿಯಾನ ನಿರ್ದೇಶಕರು (ಸಂಜೀವಿನಿ)
ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ
ಸಂವರ್ಧನ ಸಂಸ್ಥೆ, ಬೆಂಗಳೂರು

ಪ್ರತಿಯನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ)
3. ಅಪರ ಅಭಿಯಾನ ನಿರ್ದೇಶಕರು, ಸಂಜೀವಿನಿ (ಎನ್‌ಆರ್‌ಎಲ್‌ಎಂ)
4. ಜಂಟಿ ನಿರ್ದೇಶಕರು (ಸ್ವಉಕಾ) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
5. ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು (ಎಂ & ಇ) ಸಂಜೀವಿನಿ
6. ಸರ್ಕಾರ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
7. ಸರ್ಕಾರ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
8. ಸ್ವೀಕೃತಿ ಮತ್ತು ರವಾನೆ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
9. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
10. ಸಂಪಾದಕರು ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

*H. kan ltr1 my.comp.*